# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಉಮಾಶ್ರೀ ಇವರು ಶೂನ್ಯ ವೇಳೆಯಲ್ಲಿ ಕೋರಿರುವ ಸೂಚನೆಗೆ ಮಾಹಿತಿ ಒದಗಿಸುವ ಕುರಿತು

**ವಿಷಯ: ಜವಳಿ ಉದ್ಯಮದ ಕುಸಿತದಿಂದಾಗಿ ನೇಕಾರರ ಕುಟುಂಬಗಳು ಸಂಕಷ್ಟದಲ್ಲಿದ್ದು, ಅವರುಗಳಿಗೆ ಪರಿಹಾರಧನ ಹಾಗೂ ಅಗತ್ಯ ನೆರವು, ಸೌಲಭ್ಯಗಳನ್ನು ಒದಗಿಸುವ ಬಗ್ಗೆ.**

**ಪ್ರಶ್ನೆ: ಜಗತ್ತನೇ ಕಾಡಿದ ಮಹಾಮಾರಿ ಕರೋನಾ ಪಿಡುಗಿನಿಂದಾಗಿ ಲಾಕ್ ಡೌನ್ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿದ ನೇಕಾರಿಕೆ ಕಸುಬು ಇಲ್ಲಿಯವರೆಗೆ ಚೇತರಿಸಿಕೊಂಡಿಲ್ಲ. ನೇಕಾರಿಕೆಯನ್ನು ನಂಬಿ ಬದುಕುವವರ ಪಾಡು ಹೇಳಲು ಕಷ್ಟ ಸಾಧ್ಯವಾಗಿದೆ. ಕುಸಿದ ಜವಳಿ ಮಾರುಕಟ್ಟೆ ಹಾಗೂ ಗಗನಕ್ಕೇರಿದ ಕಚ್ಚಾವಸ್ತುಗಳ ಬೆಲೆಯಿಂದಾಗಿ ನೇಕಾರ ತತ್ತರಿಸುತ್ತಿದ್ದಾನೆ. ಇದರಿಂದಾಗಿ ತನ್ನ ಕಾಯಕ ಮುಂದುವರೆಸಲು ಮಾಡಿದ ಸಾಲ ತೀರಿಸಲಾಗದೆ ದುಸ್ಥಿಗೆ ತಲುಪಿದ್ದಾನೆ.**

**ಉತ್ತರ:-**

**ಕೈಮಗ್ಗ ನೇಕಾರರಿಗೆ:-** ಕೈಮಗ್ಗ ನೇಕಾರರ ಚಟುವಟಿಕೆಗಳ ಪಾರಂಪರಿಕ ಕಲೆ ಮತ್ತು ಅವರ ಶ್ರಮವನ್ನು ಪರಿಗಣಿಸಿ ಹಾಗೂ ಕೋವಿಡ್-19 ಮಹಾಮಾರಿ ಮತ್ತು ಆರ್ಥಿಕ ಹಿನ್ನಡೆಯಿಂದ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರರಿಗೆ 2020-21ನೇ ಸಾಲಿನಿಂದ ಅನ್ವಯವಾಗುವಂತೆ, **"ನೇಕಾರರ ಸಮ್ಮಾನ್"** ಎಂಬ ಹೊಸ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: CI 47 JAKY 2020, ದಿನಾಂಕ: 16.05.2020 ರನ್ವಯ ಜಾರಿಗೊಳಿಸಲಾಗಿರುತ್ತದೆ.

2022-23ನೇ ಸಾಲಿನ ಆಯವ್ಯಯರನ್ವಯ ನೋಂದಾಯಿತ ಕೈಮಗ್ಗ ನೇಕಾರರಿಗೆ "ನೇಕಾರರ ಸಮ್ಮಾನ್ ಯೋಜನೆಯಡಿ ಆರ್ಥಿಕ ನೆರವನ್ನು ಸರ್ಕಾರದ ಆದೇಶ ಸಂಖ್ಯೆ: CI 22 JAKY 2022, ದಿನಾಂಕ: 19.04.2022 ರನ್ವಯ ರೂ.2,000/- ಗಳಿಂದ ರೂ.5,000/- ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿರುತ್ತದೆ.

**ವಿದ್ಯುತ್ ಮಗ್ಗ ನೇಕಾರರಿಗೆ:-** 2020-21ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: CI 49 JAKY 2020, ದಿನಾಂಕ: 26.05.2020 ರನ್ವಯ ಕೋವಿಡ್-19 ಪ್ರಯುಕ್ತ ವಿದ್ಯುತ್ ಮಗ್ಗ ನೇಕಾರರಿಗೆ ರೂ.2000/- ಗಳ ಆರ್ಥಿಕ ಬೆಂಬಲ ನೀಡಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: CI 44 JAKY 2021, ದಿನಾಂಕ: 21.06.2021 ರನ್ವಯ 2021-22ನೇ ಸಾಲಿನಲ್ಲಿ ಕೋವಿಡ್-19 2ನೇ ಅಲೆ ಪ್ರಯುಕ್ತ ವಿದ್ಯುತ್ ಮಗ್ಗ ನೇಕಾರರಿಗೆ ರೂ.3000/- ಗಳ ಆರ್ಥಿಕ ಬೆಂಬಲ ನೀಡಲಾಗಿದ್ದು, ಸದರಿ ರೂ.3000/- ಗಳ ಪರಿಹಾರಧನವನ್ನು ಸರ್ಕಾರದ ಆದೇಶ ಸಂಖ್ಯೆ: CI/106/JAKY/2022 ದಿನಾಂಕ: 21.12.2022 ರನ್ವಯ 2022-23ನೇ ಸಾಲಿನಿಂದ **"ನೇಕಾರರ ಸಮ್ಮಾನ್"** ಯೋಜನೆಯಡಿ ವಿದ್ಯುತ್ ಮಗ್ಗ ನೇಕಾರರಿಗೆ ವಾರ್ಷಿಕವಾಗಿ ರೂ.5,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿರುತ್ತದೆ.

ರಾಜ್ಯದ ಎಲ್ಲಾ ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರರು ಹಾಗೂ ಮಗ್ಗ ಪೂರ್ವ ಕೆಲಸಗಾರರಿಗೆ "ನೇಕಾರರ ಸಮ್ಮಾನ್" ಯೋಜನೆಯಡಿಯಲ್ಲಿ ಪ್ರತಿ ವರ್ಷ ರೂ.5000/- ಗಳ ಆರ್ಥಿಕ ನೆರವು ನೀಡಲಾಗುತ್ತಿದೆ. ಪ್ರಸಕ್ತ 2024-25ನೇ ಸಾಲಿಗೆ "ನೇಕಾರರ ಸಮ್ಮಾನ್" ಯೋಜನೆಯಡಿ ಆರ್ಥಿಕ ರೂ.81.00 ಕೋಟಿಗಳನ್ನು ಹಾಗೂ ಭೌತಿಕವಾಗಿ 1,62,000 ಗಳ ಗುರಿ ನಿಗಧಿಪಡಿಸಲಾಗಿದೆ.

..2

**ಪ್ರಶ್ನೆ: ಸಾಮಾಜಿಕ, ಆರ್ಥಿಕ ಮತ್ತು ಔದ್ಯೋಗಿಕ ಹೊಡೆತದಿಂದ ಮೇಲೇಳಲಾಗದೇ ಒತ್ತಡಕ್ಕೆ ಸಿಲುಕಿ ಆತ್ಮಹತ್ಯೆ ಒಂದೇ ದಾರಿ ಎಂಬ ತೀರ್ಮಾನಕ್ಕೆ ಬರುತ್ತಿರುವ ನೇಕಾರರ ಮನೋಬಲ ಹೆಚ್ಚಿಸುವ ಕಾರ್ಯಗಳನ್ನು ಇಂದಿನ ಸರ್ಕಾರವು ಮಾಡಲು ಮುಂದಾಗಬಹುದೆಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.**

**ರಾಷ್ಟ್ರಮಟ್ಟದಲ್ಲಿ ಬಹುದೊಡ್ಡ ಬಂಡವಾಳದಾರರು ಜವಳಿ ಉದ್ಯಮದತ್ತ ಮುಖ ಮಾಡಲು ಅವಕಾಶ ಸಿಕ್ಕಿರುವ ಹಿನ್ನೆಲೆಯಲ್ಲಿ ಬಡನೇಕಾರರಿಗೆ ಕಚ್ಚಾ ವಸ್ತುವಿನ ಕೊರತೆಯಾಗಿದೆ. ಜವಳಿ ಉದ್ಯಮ ಕುಸಿತಕ್ಕೆ ಇದುವು ಕೂಡ ಒಂದು ಕಾರಣವೆನ್ನಬಹುದು. ಬೃಹತ್ ಜವಳಿ ಉದ್ಯಮದ ಎದುರು ಸ್ಥಳೀಯವಾಗಿ ನೇಕಾರಿಕೆಯನ್ನೇ ನಂಬಿ ಬದುಕುವ ನೇಕಾರರು ನಿಧಾನವಾಗಿ ಆತ್ಮಹತ್ಯೆಯ ದಾರಿ ಹಿಡಿಯುತ್ತಿರುವುದು ವಿಷಾಧನೀಯ ಸಂಗತಿಯಾಗಿದೆ. ಇತ್ತೀಚೆಗೆ ಸಾಲದ ಬಾಧೆಯನ್ನು ತಾಳಲಾರದೆ ನಾಲ್ವರು ನೇಕಾರರು ಆತ್ಮಹತ್ಯೆ ಮಾಡಿಕೊಂಡಿರುವುದು ಇಲಾಖೆಯ ಗಮನಕ್ಕೆ ಬಂದಿರಬಹುದೆಂದು ಭಾವಿಸುತ್ತೇನೆ.**

**ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಹಳೇಪಾಳ್ಯದ ನಿವಾಸಿಯಾದ ಶ್ರೀನಾಥ್ (46) ಹಾಗೂ ಅದೇ ಊರಿನವರಾದ ಮಧುನಾಯಕ್ (38) ಮತ್ತು ಚರಿತಾಬಾಯಿ ನಾಯಕ್ (34) ದಂಪತಿಗಳು ನೇಣಿಗೆ ಶರಣಾಗಿದ್ದಾರೆ. ಮತ್ತೋರ್ವ ನೇಕಾರ ಅಣ್ಣಾಪುರದ ನಿವಾಸಿಯಾದ ನಾಗರಾಜು (48) ಎಂಬುವವರು ಅಮಾನಿಕೆರೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಇವರುಗಳು ಖಾಸಗಿ ಫೈನಾನ್ಸ್ ನಿಂದ ಸಾಲ ಪಡೆದು ಉದ್ಯೋಗ ನಡೆಸಿದ್ದರೂ ವ್ಯಾಪಾರ ವಹಿವಾಟು ಕೈಕೊಟ್ಟ ಹಿನ್ನೆಲೆಯಲ್ಲಿ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದುಬಂದಿದೆ.**

---

ಉತ್ತರ:-

ಇತ್ತೀಚೆಗೆ ಸಾಲದ ಬಾದೆಯನ್ನು ತಾಳಲಾರದೆ ನಾಲ್ವರು ನೇಕಾರರು ಆತ್ಮಹತ್ಯೆ ಮಾಡಿಕೊಂಡಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ನೇಕಾರರನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಮೇಲೆತ್ತಲು ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:-

- 2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-265 ರಲ್ಲಿ ಘೋಷಿಸಿದಂತೆ "01 ರಿಂದ 10 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ Energy Charges + Fixed Charges (FC) + Fuel adjustment charges (FAC) + Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಸರ್ಕಾರದಿಂದ ಭರಿಸಿ "ಶೂನ್ಯ ಬಿಲ್" ನೀಡಲಾಗುತ್ತಿದೆ.
- 10.01 ಹೆಚ್.ಪಿ ಗಿಂತ ಹೆಚ್ಚು ಹಾಗೂ 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಪ್ರಸ್ತುತ ನೀಡುತ್ತಿರುವಂತೆ Energy Charges ನ ಮೊತ್ತದಲ್ಲಿ ಪ್ರತಿ ಯೂನಿಟ್‌ಗೆ ರೂ.1.25/- ಗಳನ್ನು ಘಟಕ ಒಂದಕ್ಕೆ ಮಾಸಿಕ ಗರಿಷ್ಠ 500 ಯೂನಿಟ್‌ಗಳವರೆಗೆ ಮಾತ್ರ ಘಟಕದವರು ಪಾವತಿಸುವುದು ಹಾಗೂ ಉಳಿಕೆ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸುವುದು. ಉಳಿದಂತೆ ಈ ಘಟಕಗಳಿಗೆ (20 ಹೆಚ್.ಪಿ ವರೆಗೆ) Fixed Charges(FC) + Fuel adjustment charges(FAC) + Tax ಮೊತ್ತವನ್ನು ನೇಕಾರರೇ ಭರಿಸುವುದು. ಮಾಸಿಕ 500 ಯೂನಿಟ್ ಮೇಲ್ಪಟ್ಟು Energy charges ಹಾಗೂ Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಘಟಕದವರೇ ಭರಿಸತಕ್ಕದ್ದು ಎಂದು ಸರ್ಕಾರದ ಆದೇಶ ಸಂಖ್ಯೆ: CI/37/JAKY/2023 ದಿನಾಂಕ:20.10.2023 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

- ಅದರಂತೆ ರಾಜ್ಯದಲ್ಲಿನ 01 ರಿಂದ 10 ಹೆಚ್.ಪಿ. ವರೆಗಿನ ಸುಮಾರು 27,759 ಘಟಕಗಳು ಹಾಗೂ 10 ಕ್ಕಿಂತ ಹೆಚ್ಚು ಮತ್ತು 20 ಹೆಚ್.ಪಿ. ವರೆಗಿನ ಸುಮಾರು 1,618 ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳು ಪ್ರಯೋಜನ ಪಡೆಯುತ್ತಿರುತ್ತಾರೆ.

**ಕೈಮಗ್ಗ ಉದ್ದಿಮೆಯನ್ನು ಉತ್ತೇಜಿಸಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗುತ್ತಿದೆ.**

- ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ (ಎನ್.ಹೆಚ್.ಡಿ.ಸಿ) ವತಿಯಿಂದ ವೈಯಕ್ತಿಕ ಕೈಮಗ್ಗ ನೇಕಾರರು / ಸಂಘ ಸಂಸ್ಥೆಯವರಿಗೆ ಶೇ.15 ರಷ್ಟು ಸಹಾಯಧನದೊಂದಿಗೆ ರೇಷ್ಮೆ/ ಹತ್ತಿ / ಉಣ್ಣೆ/ ಲೇನಿನ್ ನೂಲನ್ನು ನೀಡುತ್ತಿದ್ದಾರೆ.
- ರಾಜ್ಯ ಸರ್ಕಾರದಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಕಚ್ಚಾ ನೂಲು ಖರೀದಿ ಮೇಲೆ ಪ್ರತಿ ಕೆ.ಜಿ.ಗೆ ರೂ.15/– ಸಹಾಯಧನ ನೀಡಲಾಗುತ್ತಿದೆ.

ಪ್ರಶ್ನೆ: **ಆದ್ದರಿಂದ ದಯಮಾಡಿ ಮಾನ್ಯ ಇಲಾಖೆಯ ಸಚಿವರು ಇತ್ತ ಗಮನಹರಿಸಿ ಈ ನೇಕಾರರ ಕುಟುಂಬಗಳಿಗೆ ಪರಿಹಾರಧನ ಒದಗಿಸಿ, ಅನಾಥರಾಗಿರುವ ಅವರ ಹೆಂಡತಿ, ಮಕ್ಕಳಿಗೆ ಸರ್ಕಾರದಿಂದ ಅಗತ್ಯ ನೆರವುಗಳನ್ನು ಹಾಗೂ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಈ ಮೂಲಕ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.**

<u>ಉತ್ತರ:–</u>

ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಹಳೇಪಾಳ್ಯದ ನಿವಾಸಿಯಾದ ಮಧುನಾಯಕ್ (38), ಚರಿತಾಬಾಯಿ ನಾಯಕ್ (34) ಮತ್ತು ಅಣ್ಣಾಪುರದ ನಿವಾಸಿಯಾದ ನಾಗರಾಜು (48) ರವರುಗಳು "ನೇಕಾರರ ಸಮ್ಮಾನ್" ಯೋಜನೆಯಡಿ ನೋಂದಾಯಿಸಿಕೊಂಡಿದ್ದು, 2022–23 & 2023–24ನೇ ಸಾಲುಗಳಲ್ಲಿ ನೇಕಾರರ ಸಮ್ಮಾನ್ (ವಿದ್ಯುತ್ ಮಗ್ಗ) ಯೋಜನೆಯಡಿ ತಲಾ ರೂ.5000/– ಗಳ ಆರ್ಥಿಕ ನೆರವನ್ನು ನೇಕಾರರ ಖಾತೆಗೆ ಡಿ.ಬಿ.ಟಿ ಮುಖಾಂತರ ವರ್ಗಾಯಿಸಲಾಗಿರುತ್ತದೆ.

ಮುಂದುವರೆದು, ಕಳೆದ 3–4 ವರ್ಷಗಳಲ್ಲಿ ಸಾಲದ ಬಾಧೆಯಿಂದ 42 ಜನ ನೇಕಾರರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅದರಲ್ಲಿ 25 ನೇಕಾರರ ಕುಟುಂಬಗಳಿಗೆ CMRFCOVID-19 ವತಿಯಿಂದ ತಲಾ ರೂ.5.00 ಲಕ್ಷಗಳಂತೆ ಒಟ್ಟು ರೂ.125.00 ಲಕ್ಷಗಳ ಪರಿಹಾರಧನ ನೀಡಲಾಗಿರುತ್ತದೆ.

ಉಳಿದ 10 ನೇಕಾರರ ಪ್ರಸ್ತಾವನೆಗಳನ್ನು ಮೃತ ನೇಕಾರರು ಪ್ರಧಾನ ಮಂತ್ರಿ ಜೀವನ್ ಜೋತಿ ಬಿಮಾ ಯೋಜನೆ (PMJJBY) ಅಡಿ ನೊಂದಾಯಿಸಿಕೊಂಡಿದ್ದಲ್ಲಿ ಈ ಯೋಜನೆಯಡಿ ಪರಿಹಾರಧನ ಪಡೆಯಲು ಹಿಂಬರಹ ನೀಡಲಾಗಿರುತ್ತದೆ. 07 ನೇಕಾರರ ಪ್ರಸ್ತಾವನೆಗಳನ್ನು ಅರ್ಹ ದಾಖಲಾತಿಗಳಿಲ್ಲದ ಕಾರಣ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.

ಆತ್ಮಹತ್ಯೆ ಮಾಡಿಕೊಂಡಿರುವ ನೇಕಾರರಿಗೆ ಪರಿಹಾರಧನ ಒದಗಿಸಲು ಇಲಾಖೆಯಲ್ಲಿ ಯಾವುದೇ ಯೋಜನೆಯು ಇರುವುದಿಲ್ಲ.

ಆತ್ಮಹತ್ಯೆ ಮಾಡಿಕೊಂಡಿರುವ ಸದರಿ ನೇಕಾರರುಗಳು Pradhan Mantri Jeevan Jyoti Bima Yojana (PMJJBY)/ Pradhan Mantri Suraksha Bima Yojana (PMSBY) ವಿಮಾ ಯೋಜನೆಯಡಿಯಲ್ಲಿ ನೋಂದಾಯಿಸಿಕೊಂಡಿದ್ದಲ್ಲಿ ಪರಿಶೀಲಿಸಿ ರೂ.2.00 ಲಕ್ಷಗಳ ವಿಮಾ ಪರಿಹಾರ ಒದಗಿಸುವಲ್ಲಿ ಸಂಬಂಧಪಟ್ಟ ಬ್ಯಾಂಕ್‌ನವರೊಂದಿಗೆ ಸಮನ್ವಯಿಸಿ ತ್ವರಿತವಾಗಿ ಪರಿಹಾರ ಒದಗಿಸಲು ಕ್ರಮವಹಿಸಲಾಗುವುದು.

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು**

## ಅನುಬಂಧ

## ಕಳೆದ 03-04 ವರ್ಷಗಳಲ್ಲಿ ಆತ್ಮಹತ್ಯೆಗೆ ಶರಣಾದ ನೇಕಾರರ ವಿವರ

| ಕ್ರ.ಸಂ | ಸಾಲು | ಜಿಲ್ಲೆ | ಮತಕ್ಷೇತ್ರ | ಹೆಸರು & ವಿಳಾಸ | ಆತ್ಮಹತ್ಯೆ ಮಾಡಿಕೊಂಡ ದಿನಾಂಕ | ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ದಿನಾಂಕ | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಬಿಡುಗಡೆಯಾದ ಪರಿಹಾರಧನ / ಷರಾ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|
| 1 | 2020-21 | ಧಾರವಾಡ | ಧಾರವಾಡ ಗ್ರಾಮೀಣ | ಶ್ರೀ ಚಂದ್ರಕಾಂತ ಈರಪ್ಪ ತಾವರೆನ್ನವರ ಬಿನ್ ಈರಪ್ಪ ತಾವರೆನ್ನವರ, ಧಾರವಾಡ ಜಿಲ್ಲೆ | 13.06.2020 | 14.06.2020 | 5.00 |
| 2 | 2020-21 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಸುಜಿತ ಚಂದ್ರ ಉಪರಿ ಬಿನ್ ಚಂದ್ರ ಉಪರಿ, ಬೆಳಗಾವಿ ಜಿಲ್ಲೆ | 28.05.2020 | 29.05.2020 | 5.00 |
| 3 | 2020-21 | ಬೆಳಗಾವಿ | ಯಮಕನಮರಡಿ | ಶ್ರೀ ಶಂಕರ ವಾಮನ ಶೆಡಿಶ್ಯಾಳಿ ಬಿನ್ ವಾಮನ ಶೆಡಿಶ್ಯಾಳಿ, ಬೆಳಗಾವಿ ಜಿಲ್ಲೆ | 03.06.2020 | 06.06.2020 | 5.00 |
| 4 | 2020-21 | ಬೆಳಗಾವಿ | ಯಮಕನಮರಡಿ | ಶ್ರೀ ಸಂಜು ರಾಮಪ್ಪ ಮಜತಿ, ಸಾ: ದಾದಬಾನಹಟ್ಟಿ, ಪೋ:ಹತ್ತರಗಿ, ಹುಕ್ಕೇರಿ ತಾ॥ ಬೆಳಗಾವಿ ಜಿಲ್ಲೆ | 22.11.2020 | 28.12.2020 | 5.00 |
| 5 | 2020-21 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಸಿದ್ದಲಿಂಗೇಶ್ವರ ಗಂಗಪ್ಪ ಹೊರಕೇರಿ, ತೆಗ್ಗಿನಗಲ್ಲಿ, ವಡಗಾವಿ, ಬೆಳಗಾವಿ ಜಿಲ್ಲೆ | 09.02.2021 | 24.02.2021 | 5.00 |
| 6 | 2020-21 | ರಾಮನಗರ | ಮಾಗಡಿ | ಶ್ರೀ ಕೆ.ಎಸ್.ರವಿಕುಮಾರ್, ಶಿವಗಂಗೆ ರಸ್ತೆ, ಕುದೂರು, ಮಾಗಡಿ ತಾ॥, ರಾಮನಗರ ಜಿಲ್ಲೆ | 01.12.2020 | 01.02.2021 | 5.00 |
| 7 | 2020-21 | ಬೆಳಗಾವಿ | ಕಿತ್ತೂರು | ಶ್ರೀ ಪ್ರಕಾಶ ಈರಪ್ಪ ಢಗೆ, ಸಾ.ಡೊಂಬರಕೊಪ್ಪ, ಬೆಳಗಾವಿ ಜಿಲ್ಲೆ | 08.07.2020 | 21.08.2020 | 5.00 |
| 8 | 2020-21 | ಬೆಳಗಾವಿ | ಯಮಕನಮರಡಿ | ಶ್ರೀ ಶಿವಾನಂದ ಸಿದ್ದಪ್ಪಾ ಜಮನಾಳ ಸಾ. ಯಮಕನಮರಡಿ, ಹುಕ್ಕೇರಿ ತಾ॥ ಬೆಳಗಾವಿ ಜಿಲ್ಲೆ | 24.08.2020 | 07.09.2020 | 5.00 |
| 9 | 2020-21 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಸಂತೋಷ ಶಂಕರ ಢಗೆ, ನಂ.14, ದೇವಾಂಗ ನಗರ, 3ನೇ ಕ್ರಾಸ್, ವಡಗಾವಿ, ಬೆಳಗಾವಿ ಜಿಲ್ಲೆ | 01.10.2020 | 04.11.2020 | 5.00 |
| 10 | 2020-21 | ಬೆಂಗಳೂರು ನಗರ | ಯಲಹಂಕ | ಶ್ರೀ ಲಕ್ಷ್ಮೀಪತಿ, 9ನೇ ಕ್ರಾಸ್, ಯಲಹಂಕ ಅಗ್ರಹಾರ ಬಡಾವಣೆ, ಬೆಂಗಳೂರು ನಗರ ಜಿಲ್ಲೆ | 23.07.2020 | 29.07.2020 | 5.00 |

| ಕ್ರ.ಸಂ | ಸಾಲು | ಜಿಲ್ಲೆ | ಮತಕ್ಷೇತ್ರ | ಹೆಸರು & ವಿಳಾಸ | ಆತ್ಮಹತ್ಯೆ ಮಾಡಿಕೊಂಡ ದಿನಾಂಕ | ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ದಿನಾಂಕ | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಬಿಡುಗಡೆಯಾದ ಪರಿಹಾರಧನ / ಷರಾ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|
| 11 | 2020-21 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ | ಶ್ರೀ ನಾರಾಯಣ, ನಂ.368, 13ನೇ ವಾರ್ಡ್, ಭುವನೇಶ್ವರಿನಗರ, ದೊಡ್ಡಬಳ್ಳಾಪುರ, ಬೆಂ.ಗ್ರಾ ಜಿಲ್ಲೆ | 23.06.2020 | 07.07.2020 | 5.00 |
| 12 | 2020-21 | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ | ಶ್ರೀಮತಿ ವೆಂಕಟಲಕ್ಷ್ಮಮ್ಮ ಕೋಂ ಚಿಕ್ಕಪ್ಪಯ್ಯ, ಬೈಯಪ್ಪನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ. | 05.07.2020 | 14.07.2020 | 5.00 |
| 13 | 2021-22 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಮೋಹನ ಎಗಪ್ಪ ಡೊಂಬರ ಬಿನ್ ಎಗಪ್ಪ ಡೊಂಬರ, ದೇವಾಂಗ ನಗರ, 4ನೇ ಕ್ರಾಸ್, ವಡಗಾವಿ, ಬೆಳಗಾವಿ | 23.03.2021 | 23.04.2021 | 5.00 |
| 14 | 2021-22 | ಬೆಳಗಾವಿ | ಬೆಳಗಾವಿ ದಕ್ಷಿಣ | ದಿ.ಶ್ಯಾಮಸುಂದರ ಹಣಮಂತಪ್ಪ ನಾಗರಾಳ, ಮ.ನಂ.47, ಪ್ಲಾಟ ನಂ.34, ರೇಣುಕಾ ನಗರ, ಹಳೆ ಬೆಳಗಾವಿ | 14.08.2021 | 24.09.2021 | 5.00 |
| 15 | 2021-22 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ | ಶ್ರೀ ರವೀಂದ್ರ ಬಿನ್ ವೆಂಕಟಸ್ವಾಮಿ, ವಿದ್ಯಾನಗರ, ದೊಡ್ಡಬಳ್ಳಾಪುರ, ಬೆಂ.ಗ್ರಾ ಜಿಲ್ಲೆ | 27.05.2021 | 15.07.2021 | 5.00 |
| 16 | 2021-22 | ಬಾಗಲಕೋಟೆ | ತೇರದಾಳ | ಷಣ್ಮುಕ ಗೊಡೆಚಪ್ಪ ಮುರಗುಂಡಿ, ವಾರ್ಡ್ ನಂ.18 ನೀಲಕಂಠೇಶ್ವರ ಮಠದ ಹತ್ತಿರ ಸಾ॥ ರಾಂಪುರ, ಬಾಗಲಕೋಟೆ ಜಿಲ್ಲೆ | 29.06.2021 | 09.09.2021 | 5.00 |
| 17 | 2021-22 | ತುಮಕೂರು | ತಿಪಟೂರು | ಶ್ರೀ ಜಗದೀಶ್‌ಬಾಬು ಬಿನ್ ಜಾನಿ, ಗಾಂಧಿನಗರ, ತಿಪಟೂರು ತಾ॥, ತುಮಕೂರು ಜಿಲ್ಲೆ. | 25.12.2020 | 28.10.2021 | 5.00 |
| 18 | 2021-22 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಪಾಂಡುರಂಗ ರಾಮಚಂದ್ರ ಉಪರಿ, ಮನೆ.ನಂ. 243/ಎ, ಉಪ್ಪಾರಗಲ್ಲಿ, ಖಾಸಭಾಗ, ಬೆಳಗಾವಿ | 28.10.2021 | 02.11.2021<br>29.11.2021 | 5.00 |
| 19 | 2021-22 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಗೋಪಾಲ ಜ್ಯೋತಿಬಾ ಸಂಗಮನವರ, ಮನೆ. ನಂ.04, ಮಲಪ್ರಭಾನಗರ, ವಡಗಾವಿ, ಬೆಳಗಾವಿ | 10.11.2021 | 19.11.2021<br>10.12.2021 | 5.00 |
| 20 | 2021-22 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಗಣಪತಿ ರಾಮಚಂದ್ರ ಬುಚಡಿ, ಮನೆ.ನಂ.37/1, 4ನೇ ಅಡ್ಡ ರಸ್ತೆ, ಶಿವಾಜಿ ಗಲ್ಲಿ, ವಡಗಾವಿ, ಬೆಳಗಾವಿ | 10.11.2021 | 19.11.2021 | 5.00 |
| 21 | 2021-22 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಗುಂಡು ಸಿದ್ರಾಮ ಭಂಡಾರಿ, ಮನೆ.ನಂ.10, ಮಲಪ್ರಭಾ ನಗರ, ವಡಗಾವಿ, ಬೆಳಗಾವಿ | 26.06.2021 | 14.12.2021 | 5.00 |
| 22 | 2021-22 | ಬೆಳಗಾವಿ | ಕಿತ್ತೂರು | ಶ್ರೀ ವೀರಣ್ಣ ಮಲ್ಲಿಕಾರ್ಜುನ ಇಟಗಿ, ಕಿತ್ತೂರು ಸಾ & ತಾ॥, ಬೆಳಗಾವಿ | 07.10.2021 | 02.11.2021<br>15.12.2021 | 5.00 |

| ಕ್ರ.ಸಂ | ಸಾಲು | ಜಿಲ್ಲೆ | ಮತಕ್ಷೇತ್ರ | ಹೆಸರು & ವಿಳಾಸ | ಆತ್ಮಹತ್ಯೆ ಮಾಡಿಕೊಂಡ ದಿನಾಂಕ | ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ದಿನಾಂಕ | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಬಿಡುಗಡೆಯಾದ ಪರಿಹಾರಧನ / ಷರಾ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|
| 23 | 2021-22 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಗಣೇಶ ಬೈರಪ್ಪ ಭಂಡಾರಿ, ಮಲಪ್ರಭಾನಗರ, ವಡಗಾವಿ, ಬೆಳಗಾವಿ | 20.03.2021 | 14.12.2021<br>08.07.2021 | 5.00 |
| 24 | 2021-22 | ಬಾಗಲಕೋಟೆ | ತೇರದಾಳ | ಶ್ರೀ ಚನ್ನಪ್ಪ ಗಂಗಪ್ಪ ಯಡಹಳ್ಳಿ, ಹ್ಯಾಗಾಡಿ ಪ್ಲಾಟ್, ಮಹಾಲಿಂಗಪೂರ, ರಬಕವಿ-ಬನಹಟ್ಟಿ, ಬಾಗಲಕೋಟೆ | 10.11.2021 | 12.11.2021 | 5.00 |
| 25 | 2021-22 | ಬಾಗಲಕೋಟೆ | ತೇರದಾಳ | ಶ್ರೀ ಮಲ್ಲಪ್ಪ ಅದೃಶಪ್ಪ ಯಡಪ್ಪನವರ, ವಾ.ನಂ.15, ಹೆಗಡಿ ಪ್ಲಾಟ್, ಮಹಾಲಿಂಗಪೂರ, ಬಾಗಲಕೋಟೆ | 11.07.2021 | 15.12.2021 | 5.00 |
| 26 | 2021-22 | ರಾಮನಗರ | ಮಾಗಡಿ | ಶ್ರೀ ಕೆ.ಆರ್.ಗುರುರಾಜು ಬಿನ್ ಲೇ॥ ಟಿ.ರಾಮಕೃಷ್ಣಪ್ಪ, 1ನೇ ಬ್ಲಾಕ್, ಕೋಟೆ ಬೀದಿ, ಕುದೂರು, ಮಾಗಡಿ ತಾ॥, ರಾಮನಗರ ಜಿಲ್ಲೆ | 03.12.2020 | 17.04.2021 | ಎಫ್.ಐ.ಆರ್ ಸಲ್ಲಿಸದ ಕಾರಣ ಪ್ರಸ್ತಾವನೆ ಮಾನ್ಯವಾಗಿರುವುದಿಲ್ಲ. |
| 27 | 2021-22 | | ಮಾಗಡಿ | ಶ್ರೀ ಎನ್.ಬಸವರಾಜು ಬಿನ್ ನರಸಿಂಹಯ್ಯ, ಮಹಾತ್ಮನಗರ, 5ನೇ ಬ್ಲಾಕ್, ಕೋಟೆ ಬೀದಿ, ಕುದೂರು, ಮಾಗಡಿ ತಾ॥, ರಾಮನಗರ ಜಿಲ್ಲೆ | 08.12.2020 | 17.04.2021 | |
| 28 | 2021-22 | ತುಮಕೂರು | ತಿಪಟೂರು | ಶ್ರೀ ಹರೀಶ್ ಬಿನ್ ಬಸವರಾಜು, ಹಳೇಪಾಳ್ಯ, ತಿಪಟೂರು ತಾ॥, ತುಮಕೂರು ಜಿಲ್ಲೆ | 12.01.2022 | 24.02.2022 | ಆರ್ಥಿಕ ಇಲಾಖೆಯು ಸೂಚನೆಯಂತೆ ಸದರಿ ಮೃತ ನೇಕಾರರು PMJJBY ಅಡಿ ನೋಂದಾಯಿಸಿಕೊಂಡಿದ್ದಲ್ಲಿ ಆ ಯೋಜನೆಯಡಿ ಪರಿಹಾರಧನ ಪಡೆಯಲು ತ್ವರಿತ ಕ್ರಮವಹಿಸಬೇಕೆಂದು ವಿಭಾಗ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. |
| 29 | 2021-22 | ಬೆಂಗಳೂರು ಗ್ರಾಮಾಂತರ | ನೆಲಮಂಗಲ | ಶ್ರೀ ಆನಂದ್. ಆರ್ ಬಿನ್ ರಾಜಣ್ಣ.ಕೆ. ಯಲ್ಲಮ್ಮನಗರ, ವೀವರ್ಸ್ ಕಾಲೋನಿ, ನೆಲಮಂಗಲ, ಬೆಂ.ಗ್ರಾ.ಜಿಲ್ಲೆ | 20.12.2021 | 19.02.2022 | |
| 30 | 2021-22 | | ದೇವನಹಳ್ಳಿ | ಶ್ರೀ ನಾಗರಾಜ.ಪಿ.ಜಿ ಬಿನ್ ಗೋವಿಂದಪ್ಪ, ಪಾಪನಹಳ್ಳಿ, ದೇವನಹಳ್ಳಿ ತಾ॥, ಬೆಂ.ಗ್ರಾ.ಜಿಲ್ಲೆ | 18.04.2021 | 19.02.2022 | |
| 31 | 2022-23 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಕೃಷ್ಣಪ್ಪಾ ಶಂಕರ ಸೊಂಟಕ್ಕಿ, ತೆಗ್ಗಿನ ಗಲ್ಲಿ, ವಡ್ಡರ ಭಾವಣಿ, ವಡಗಾವಿ, ಬೆಳಗಾವಿ | 04.05.2022 | 13.05.2022 | |

| ಕ್ರ.ಸಂ | ಸಾಲು | ಜಿಲ್ಲೆ | ಮತಕ್ಷೇತ್ರ | ಹೆಸರು & ವಿಳಾಸ | ಆತ್ಮಹತ್ಯೆ ಮಾಡಿಕೊಂಡ ದಿನಾಂಕ | ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ ದಿನಾಂಕ | ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಬಿಡುಗಡೆಯಾದ ಪರಿಹಾರಧನ / ಷರಾ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|
| 32 | 2022-23 | ಬಾಗಲಕೋಟೆ | ಬಾಗಲಕೋಟೆ | ಶ್ರೀ ಶಂಕ್ರಪ್ಪ ಮಲ್ಲಪ್ಪ ದಂಡಾವತಿ, ನಂ.38, ಲಕ್ಷ್ಮೀನಗರ, ಕಮತಗಿ, ಹುನಗುಂದ, ಬಾಗಲಕೋಟೆ | 17.03.2023 | 30.03.2022<br>08.06.2022 | ಆರ್ಥಿಕ ಇಲಾಖೆಯ ಸೂಚನೆಯಂತೆ ಸದರಿ ಮೃತ ನೇಕಾರರು PMJJBY ಅಡಿ ನೋಂದಾಯಿಸಿಕೊಂಡಿದ್ದಲ್ಲಿ ಆ ಯೋಜನೆಯಡಿ ಪರಿಹಾರಧನ ಪಡೆಯಲು ತ್ವರಿತ ಕ್ರಮವಹಿಸಬೇಕೆಂದು ವಿಭಾಗ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. |
| 33 | 2022-23 | ಬೆಳಗಾವಿ | ಯಮಕನಮರಡಿ | ಶ್ರೀ ಲಕ್ಷ್ಮಣ ಬಾಳಕೃಷ್ಣ ತುಗಶೆಟ್ಟಿ, ಮಾರ್ಯಾಳಿ ಗಲ್ಲಿ, ಯಮಕನಮರಡಿ, ಹುಕ್ಕೇರಿ ತಾ॥ ಬೆಳಗಾವಿ | 29.04.2022 | 12.05.2022<br>17.06.2022 | |
| 34 | 2022-23 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ರಮೇಶ ಶ್ರೀಕಾಂತ ಹಜೇರಿ, ವರದಪ್ಪ ಗಲ್ಲಿ, ಖಾಸಭಾಗ, ಬೆಳಗಾವಿ | 12.06.2022 | 17.06.2022<br>27.07.2022 | |
| 35 | 2022-23 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಗಣೇಶ ಕುಶಪ್ಪಾ ತವರಿ, ದಾನೇಶ್ವರಿ ನಗರ, ವಡಗಾವಿ ಬೆಳಗಾವಿ | 21.04.2022 | 17.08.2022 | |
| 36 | 2022-23 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ರಮೇಶ ಕೃಷ್ಣಾ ವಾಗೂಕರ, ನಂ.408, ವಡ್ಡರ ಛಾವಣಿ, ಭಾರತ ನಗರ, ಶಹಾಪುರ, ಬೆಳಗಾವಿ | 15.07.2022 | 03.08.2022<br>26.08.2022 | |
| 37 | 2022-23 | ಬೆಳಗಾವಿ | ಬೆಳಗಾವಿ ದಕ್ಷಿಣ | ಶ್ರೀ ಕಲ್ಲಪ್ಪ ರುದ್ರಪ್ಪ ಸೊಂಟಕ್ಕಿ, ನಂ0439/ಎ, ಮಲಪ್ರಭಾ ನಗರ, ವಡಗಾವಿ, ಬೆಳಗಾವಿ | 19.06.2022 | 20.08.2022 | |
| 38 | 2022-23 | ವಿಜಯಪುರ | ಮುದ್ದೇಬಿಹಾಳ | ಶ್ರೀ ದಾನಪ್ಪ ಮಲಕಾಜಪ್ಪ ಹೆಬ್ಬಾಳ, ವಿಜಯಪುರ | 07.10.2022 | 13.02.2023 | |
| 39 | 2022-23 | ಬೆಳಗಾವಿ | ಯಮಕನಮರಡಿ | ಶ್ರೀ ವೀರಣ್ಣ ಶಂಕರ ಹಂಚಿ, ಆನಂದಪೂರ, ಹತ್ತರಗಿ, ಹುಕ್ಕೇರಿ ತಾ॥, ಬೆಳಗಾವಿ ಜಿಲ್ಲೆ | 26.12.2022 | 18.02.2023 | ಕೋವಿಡ್ ಸಂಕಷ್ಟದಿಂದ ಆತ್ಮಹತ್ಯೆ ಮಾಡಿಕೊಂಡಿಲ್ಲದ ಕಾರಣ ಸದರಿ ಪ್ರಸ್ತಾವನೆಗಳನ್ನು ಹಿಂದಿರುಗಿಸಲಾಗಿರುತ್ತದೆ. |
| 40 | 2023-24 | | ಬೆಳಗಾವಿ ದಕ್ಷಿಣ | ಶ್ರೀ ಪರಶುರಾಮ ಯಲ್ಲಪ್ಪ ಸೊಂಟಕ್ಕಿ, ಸಿಸಿಬಿ ನಂ.590, ನಂ.301/2, 5ನೇ ಅಡ್ಡರಸ್ತೆ, ದೇವಾಂಗ ನಗರ, ವಡಗಾವಿ, ಬೆಳಗಾವಿ ಜಿಲ್ಲೆ | 08.02.2023 | 03.04.2023 | |
| 41 | 2023-24 | | ಬೆಳಗಾವಿ ದಕ್ಷಿಣ | ಶ್ರೀ ಮಂಜುನಾಥ ಭೀಮರಾವ ಚೋಪಡಿ, ಭಾರತನಗರ, ಖಾಸಭಾಗ, ಬೆಳಗಾವಿ ಜಿಲ್ಲೆ | 05.01.2023 | 11.04.2023 | |
| 42 | 2023-24 | ಬಾಗಲಕೋಟೆ | ತೇರದಾಳ | ಶ್ರೀ ಪಡೆಪ್ಪ ಸಿದಮಲ್ಲಪ್ಪ ಮುಂಡಗನೂರ, ಸಾ ಬನಹಟ್ಟಿ ತಾ.ರಬಕವಿ-ಬನಹಟ್ಟಿ, ಬಾಗಲಕೋಟೆ | 08.03.2023 | 12.05.2023 | |

ಜಂಟಿ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ